ಶ್ರೀ ವಿ. ಎಂ. ಫಾಡಿ :—ಜಳಿಯಾಲ್ ತಾಲ್ಲೂಕಿಗೆ ಎಷ್ಟು ಧಾನ್ಯಗಳನ್ನು ಕೊಟ್ಟಿದ್ದೀರಿ ಎಂಬುದು ತಮ್ಮ ಪೇಳಿಕೆಯಲ್ಲಿ ಕಂಡುಬರುವುದಿಲ್ಲ. ಅಕ್ಟೋಬರ್ ತಿಂಗಳಿಂದ ಈ ತಾಲ್ಲೂಕಿಗೆ ಒಂದು ಕಾಳು ಅಕ್ಕಿಯನ್ನೂ ಕೊಟ್ಟಿಲ್ಲ. ಅದೇ ಪ್ರಕಾರ ಅಲ್ಲಿಗೆ ಸಕ್ಕರೆ ಕೊಟ್ಟು ಒಂದು ತಿಂಗಳಾಯಿತು. ಎಲ್ಲವೂ ಲ್ಯಾಪ್ಸ್ ಆಗಿದೆ. ತಹಸೀಲ್ದಾರರಿಗೆ ತಕ್ಕ ಸೂಚನೆಗಳನ್ನು ಕೊಡಬೇಕೆಂದು ಹೇಳಿದ್ದರೂ ಇನ್ನೂ ಕೊಟ್ಟಿಲ್ಲ. ಅದೊಂದು ತಪ್ಪು ಆಗಿದೆ. ಯಾರಾದರಿಗೋ ಅದನ್ನು ಸರಬರಾಜು ಮಾಡುತ್ತಾರೆ. ಖಾಸಗೀ ಜನಗಳನ್ನೂ ಹಾಗೂ ಸೊಸೈಟಿಯವರನ್ನೂ ಕರೆಸಿ ಒಂದು ಮೀಟಿಂಗ್ ನಡೆಸಿ ಇದರ ಬಗ್ಗೆ ಒಂದು ವಿವರಣೆ ಕೊಡಿ ಎಂದರೆ ತಹಸೀಲ್ದಾರರು ಅದನ್ನು ಕೇಳಲಿಲ್ಲ. ಅಲ್ಲಿಗೆ 600 ಕ್ವಿಂಟಾಲ್ ರೈಸ್ ಇಟ್ಟಿದ್ದದು ಈಗಾಗಲೇ ಕೆಟ್ಟುಹೋಗಿದೆ. ಇಂತಹ ಸಣ್ಣ ಕೆಲಸವನ್ನು ಸರ್ಕಾರ ಇದುವರೆಗೆ ಸರಿಮಾಡಲಿಲ್ಲ. ಆದ್ದರಿಂದ ಈಗಲಾದರೂ ಅದನ್ನು ಸರಿಪಡಿಸುತ್ತೀರಾ ?

ಶ್ರೀಮತಿ ಇ. ಇ. ವಾಜ್ :—ಬಾಯಲ್ಡ್ ರೈಸ್ ಇದ್ದುದನ್ನು ಅಲ್ಲಿನ ಜಿಲ್ಲಾಧಿಕಾರಿಗಳು ಲಿಫ್ಟ್ ಮಾಡಬೇಕೆಂದು ಹೇಳಿದೆ. ಮಾನ್ಯ ಸದಸ್ಯರು ಎರಡು ತಿಂಗಳುಗಳಿಂದಲೂ ಅಲ್ಲಿಗೇನೂ ಸರಬರಾಜು ಮಾಡಲಿಲ್ಲವೆಂದು ಹೇಳಿದರು. ಅದನ್ನು ಇನ್ನೂ ಲಿಫ್ಟ್ ಮಾಡಲಿಲ್ಲವೆಂಬುದು ಇದುವರೆಗೆ ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ಕ್ಯೂಡಲೇ ಪರಿಶೀಲನೆಮಾಡಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

(iv) Re : Corruption in the Sub-Registrar's, Offices Bangalore.

Sri T. R. SHAMANNA (Fort) :—I call the attention of the Minister for Revenue to the Corruption in the Sub-Registrar's Offices, Bangalore.

Sri N. HUTCHMASTY GOWDA (Minister for Revenue) .—I state as follows :

On 5-4-1973 I paid surprise visits to the Sub-Registry Offices at Shivajinagar and Jayanagar in Bangalore. The Inspector General of Registration and Commissioner of Stamps also accompanied me. At Shivajinagar Sub-Registrar's Office, the concerned Sub-Registrar and the Second Divisions Clerk had more cash with them than what they had declared and they did not give satisfactory explanation for having the excess cash, Therefore, both the Sub-Registrar and the Second Division Clerk have been kept under suspension, pending further enquiry into the matter.

During my inspection of the Sub-Registry Office at Jayanagar, it was found that the Sub-Registrar and the clerical staff excepting the I Division Clerk had not declared the cash with them in the cash declaration register. The I Division Clerk had Rs. 91-25 with him as against

Rs. 89-80 as declared by him. He had also another sum of Rs. 56 kept in the note book for which he did not give convincing explanation. Another official, a II Division Clerk had Rs. 25-25 which he had not declared. One more clerk had Rs. 30·25 p. which he had not declared and the peon also had an undeclared cash of Rs. 4-15. It was also found that the cash declaration register was not written up since 1-4-1973. As the three officials did not give satisfactory explanation for having excess cash with them, they have been kept under suspension pending departmental enquiry into the matter.

With a view to prevent corruption, irregularities and malpractices in the Sub-Registry Offices, frequent inspections are being made by the officers of the Registration Department and circular instructions have also been issued by the Head of the Department from time to time.

ಶ್ರೀ ಟಿ. ಆರ್. ಶಾಮಣ್ಣ :—ಪೇಪರುಗಳಲ್ಲಿ ಇವರು ಬ್ಯಾಂಕುಗಳಲ್ಲಿ ಬೇಕಾದ ಹಾಗೆ ಹಣವನ್ನು ಇಟ್ಟುಕೊಂಡಿದ್ದಾರೆ ಎಂದು ಹೇಳಲಾಗಿತ್ತು. ಆದರೆ ಅವರು ಈ ಕೇಸುಗಳನ್ನು ಹಷಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ರಾಜ್ಯದಲ್ಲಿರತಕ್ಕ ಇನ್ನು ಬೇರೆ ಸಬ್‌ರಿಜಿಸ್ಟ್ರಾರ್ಸ್ ಆಫೀಸುಗಳನ್ನು ಇದೇ ರೀತಿ ಇನ್‌ಸ್ಪೆಕ್ಷನ್ ಮಾಡುವುದಕ್ಕೆ ಏನು ಕ್ರಮಗಳನ್ನು ಕೈಗೊಂಡಿದ್ದೀರಿ?

ಶ್ರೀ ಎನ್. ಹುಚ್ಚಮಾಸ್ತಿಗೌಡ :—ಸಿವಿಲ್ ಏರಿಯಾದಲ್ಲಿರತಕ್ಕ ಸಬ್‌ರಿಜಿಸ್ಟ್ರಾರ್ ಆಫೀಸನ್ನು ಅನಿರೀಕ್ಷಿತವಾಗಿ ಚೆಕ್ ಮಾಡಿದ್ದಕ್ಕೆ 9,889 ರೂಪಾಯಿ ನಗದು ಹಣ ಆತನ ವಶದಲ್ಲಿತ್ತು. ಮತ್ತು ಅವರ ಲೆಕ್ಕಕ್ಕೆ ಸುದರ್ಶನ ಚಿಟ್ ಫಂಡಿನಲ್ಲಿ ರೂ: 4867-87, ಮತ್ತು ಬಾಲ್ಸೂರಿ ಬೆನಿಫಿಟ್ ಚಿಟ್ ಫಂಡಿನಲ್ಲಿ ರೂ: 3,100 ಇತ್ತು. ರಾಜಾಜಿನಗರವಲ್ಲೂ ಎರಡು ಸಬ್‌ರಿಜಿಸ್ಟ್ರಾರ್ಸ್, ಆಫೀಸುಗಳನ್ನು ಚೆಕ್ ಮಾಡಿದ್ದರಲ್ಲಿ ಒಂದು ಕಡೆ ಕ್ಯಾಷಿನಲ್ಲಿ ಸ್ವಲ್ಪ ವ್ಯತ್ಯಾಸ ವಿತ್ತು. ಅದಾದ ಮೇಲೆ ಬೆಂಗಳೂರಲ್ಲೂ ಎರಡು ಸಬ್‌ರಿಜಿಸ್ಟ್ರಾರ್ಸ್ ಆಫೀಸುಗಳನ್ನು ಚೆಕ್ ಮಾಡಲಾಯಿತು. ಅಲ್ಲಿ ಏನೂ ವ್ಯತ್ಯಾಸ ಕಂಡುಬರಲಿಲ್ಲ. ಹೀಗೆ ಇನ್ನೂ ಅನೇಕ ಸಬ್ ರಿಜಿಸ್ಟ್ರಾರ್ಸ್ ಆಫೀಸುಗಳನ್ನು ಅನಿರೀಕ್ಷಿತವಾಗಿ ಭೇಟಿ ಕೊಟ್ಟು ಪರೀಕ್ಷೆ ಮಾಡುತ್ತಿದ್ದೇನೆ, ಸೌತ್ ಕೆನರಾದಲ್ಲಿ ಎರಡು ಸಬ್‌ರಿಜಿಸ್ಟ್ರಾರ್ಸ್ ಆಫೀಸುಗಳನ್ನು ಚೆಕ್ ಮಾಡಿದಾಗ ಅಲ್ಲಿ ಕೂಡ ದುಡ್ಡು ಜಾಸ್ತಿ ಇತ್ತು. ಅಲ್ಲಿ ಕೂಡ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಂಡಿದೆ.

(v) *Re : Shortage of Marathi Question Papers in the S. S. L. C. Examination at Belgaum.*

Sri B. B. SAYANAK (Belgaum)—Madam Speaker, my question is wrongly worded. I have not asked regarding the non-availability of Marathi question papers but I have said that there is shortage of Marathi question papers.